ಎಂದರೆ ಜೀವನದ ಗೊತ್ತು–ಗುರಿಗಳು ಸಂಕೇತಗಳ ಮೂಲಕ ಪ್ರಕಟವಾಗುತ್ತಿರುತ್ತವೆ. ಅವುಗಳನ್ನು ಕಾಣಬಲ್ಲ ನೋಟ ನಮಗೆ ಒದಗಿದರೆ ಆಗ ನಮ್ಮ ಜೀವನ ಅದರ ಪೂರ್ಣತೆಯನ್ನು ಹೊಂದುವುದು. ಈ ಸಂಕೇತಗಳು ಕನಸಿನ ಮೂಲಕವೂ ಪ್ರಕಟವಾಗುತ್ತಿರುತ್ತವೆ ಎನ್ನುತ್ತಾರೆ, ಜೋಸೆಫ್ ಕ್ಯಾಂಬೆಲ್. ಜೀವನದ ರಹಸ್ಯಗಳು ರೂಪಕಗಳ ಸ್ವರೂಪದಲ್ಲಿ ನಮಗೆ ಅವುಗಳ ಗುಟ್ಟನ್ನು ಬಟಾಬಯಲು ಮಾಡುಲು ತವಕಿಸುತ್ತಿರುತ್ತವೆ. ಈ ರೂಪಕಗಳು ಎರಡು ಸ್ತರಗಳಲ್ಲಿ ಆಕಾರ ಪಡೆಯುತ್ತಿರುತ್ತವೆ; ಒಂದು: ಮಾನಸಿಕ ಸ್ತರದಲ್ಲಿ; ಮತ್ತೊಂದು: ಆಧ್ಯಾತ್ಮಿಕ ಸ್ತರದಲ್ಲಿ. **'Dream is metaphoric of the structures in the psyche, and your dream will correspond to the level of psychological realization that you are operating on.'** 'ಕನಸು ಎನ್ನುವುದು ನಿಮ್ಮ ಮನಸ್ಸಿನಲ್ಲಿರುವ ಆಕಾರಗಳು ಪಡೆದುಕೊಂಡ ರೂಪಕಾತ್ಮಕತೆ; ನಿಮ್ಮ ಮಾನಸಿಕ ಸಿದ್ಧಿ ನಿಮ್ಮನ್ನು ಯಾವ ಪ್ರಮಾಣದಲ್ಲಿ ಪ್ರಭಾವಿಸುತ್ತಿರುವುದೋ ಅದಕ್ಕೆ ಅನುಗುಣವಾಗಿರುತ್ತದೆ – ಕನಸು.' ಮೇಲಣ ಕಥೆಯಲ್ಲಿ ಮುಲ್ಲಾನ ಮಾನಸಿಕತೆಯನ್ನು ಅವನ ಕನಸು ಸ್ಪಷ್ಟವಾಗಿಯೇ ಸಾರುವಂತಿದೆಯಲ್ಲವೆ?

ಜೀವನ, ಸಂಕೇತ, ಪುರಾಣ, ಕನಸು – ಇವುಗಳ ಮಧ್ಯೆ ಇರುವ ನಂಟಿನ ಬಗ್ಗೆ ಪ್ರತಿಪಾದಿಸಿದ ಪ್ರಮುಖರಲ್ಲಿ ಮನೋವಿಜ್ಞಾನಿ ಕಾರ್ಲ್ ಯೂಂಗ್ ಕೂಡ ಒಬ್ಬರು. ಮನುಷ್ಯ ಈ ಸೃಷ್ಟಿಯ ಒಂದು ಪ್ರತ್ಯೇಕ ವ್ಯಕ್ತಿಯಲ್ಲ; ಅವನಿಗೂ ಇಡಿಯ ಸೃಷ್ಟಿಗೂ ಅವಿನಾಭಾವ ಸಂಬಂಧವಿದೆ. ಹೀಗಾಗಿ ಪ್ರಕೃತಿಯ ದಿಕ್ಕು–ದೆಸೆಗಳಿಗೂ ಮನುಷ್ಯನ ಮನಸ್ಸಿಗೂ ಪರಸ್ಪರ ನಂಟಿದೆ. ಯಾವುದೇ ನಂಟು ಮುಂದುವರೆಯುವುದು ಮಾತುಕತೆಯ ಮೂಲಕ ತಾನೆ? ಹೀಗೆ ಪ್ರಕೃತಿಗೂ ಮನುಷ್ಯನಿಗೂ ಸಂಭಾಷಣೆ ನಡೆಯುವುದೇ ಸಂಕೇತಗಳ ಮೂಲಕ. ಮನುಷ್ಯ ಈ ಸಂಕೇತಗಳನ್ನು ಕನಸಿನ ಮೂಲಕ ಬಿತ್ತರಿಸುತ್ತಿರುತ್ತಾನೆ. ಆದುದರಿಂದ ಪ್ರಕೃತಿಯನ್ನು ಅರಿತುಕೊಳ್ಳಲು ಮನುಷ್ಯನ ಕನಸುಗಳು ಬೆಳಕಾಗುತ್ತವೆ. ಕನಸುಗಳನ್ನು ಕಳೆದುಕೊಂಡರೆ ಭಾಷೆಯನ್ನೇ ಕಳೆದುಕೊಂಡಂತೆ. ಆಗ ನಮಗೂ ಪ್ರಕೃತಿಗೂ ಜೀವಂತ ಒಡನಾಟವೇ ನಿಂತುಹೋಗುತ್ತದೆ. ಹೀಗೆಂದು ಪ್ರತಿಪಾದಿಸುತ್ತ ಯೂಂಗ್, ಹೇಗೆ ಬ್ರಿಟಿಷರು ಆಫ್ರಿಕಾದ ಬುಡಕಟ್ಟು ಜನಾಂಗವೊಂದರ ಕನಸನ್ನು 'ಕಸಿದು'ಕೊಂಡು, ಆ ಮೂಲಕ ಪ್ರಾಕೃತಿಕ ಸಾಮರ್ಥ್ಯಗಳಿಂದಲೇ ಅವರನ್ನು ವಂಚಿತರನ್ನಾಗಿಸಿದರು ಎನ್ನುವುದನ್ನೂ ದಾಖಲಿಸಿದ್ದಾರೆ. **'As a plant produces its flower, so the psyche creates its symbols. Every dream is evidence of this process.'** ಹೂವಿಗೆ ಹುಟ್ಟು ಕೊಡುವುದು ಗಿಡಕ್ಕೆ ಸಹಜ, ಅಂತೆಯೇ ಸಂಕೇತಗಳನ್ನು ಸೃಷ್ಟಿಸಿಕೊಳ್ಳುವುದು ಮನಸ್ಸಿಗೆ. ಪ್ರತಿಯೊಂದು ಕನಸು ಕೂಡ ಈ ಪ್ರಕ್ರಿಯೆಗೆ ಸಾಕ್ಷ್ಯ. ಯೂಂಗ್ ಅವರ ಈ ಮಾತುಗಳು ಹೇಗೆ ಕನಸುಗಳು ನಮ್ಮ ಅಂತರಂಗದಲ್ಲಿ ಬೇರು ಬಿಟ್ಟು, ನಡೆ–ನಡಿಗಳ ಹೂವಿನಲ್ಲಿ ಅರಳಿ, ಕೊನೆಗೆ ವ್ಯಕ್ತಿತ್ವದಲ್ಲಿ ಫಲ ಕಾಣುತ್ತವೆ ಎನ್ನುವುದನ್ನು ನಿರೂಪಿಸುತ್ತವೆ.

ಕನಸುಗಳು ಒದಗಿಸುವ ಫಲ, ಅದು ಇಂದೂ ಸಿಗಬಹುದು; ಮುಂದೆ ಎಂದೋ ಸಿಗಬಹುದು; ಅಥವಾ ಸಿಕ್ಕದೆಯೂ ಇರಬಹುದು. ಆದರೆ ಫಲ ಎನ್ನುವುದು ಕೇವಲ ವಸ್ತುರೂಪದಲ್ಲಿಯೇ ಇರಬೇಕಿಲ್ಲವಷ್ಟೆ. ಕನಸಿನಿಂದ ನಮಗೆ ಏನೂ ಸಿಕ್ಕಿಲ್ಲ ಎಂದರೆ ಅದರ ಅರ್ಥ ನಾವು ನಮ್ಮ ಪ್ರಾಕೃತಿಕ ಭಾಷೆಯನ್ನು ಮರೆತಿದ್ದೇವೆ ಎಂದೇ ಹೌದು. ಇಲ್ಲೊಂದು